ಮಗಳೊಂದಿಗೆ ಆದಷ್ಟು ಬೇಗ ನಮ್ಮಲ್ಲಿಗೆ ಬನ್ನಿ ಆಯಿತಾ...'

ಹೆಂಡತಿ ತನ್ನ ಪಕ್ಷ ವಹಿಸಿದ್ದರಿಂದ ದೇಸಾಯರಿಗೆ ಭಾರ ಕಳಚಿದ ಲವಲವಿಕೆ. ಊರಿಗೆ ಹೋದಮೇಲೆ ಯಾಕೆ, ಬಸ್ಸಿನಲ್ಲಿಯೇ ಹೆಂಡತಿ ತನ್ನನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ ಎಂದು ದೇಸಾಯರು ಊಹಿಸಿದ್ದರು. ಅದಕ್ಕೆ ತಕ್ಕ ಉತ್ತರಗಳನ್ನೂ ಸಿದ್ಧಪಡಿಸಿ ಇಟ್ಟುಕೊಂಡಿದ್ದರು.

'ಅವಸರ ಏನಿತ್ತು? ನಾಲ್ಕಾರುದಿನ ಇದ್ದು ಬಂದಿದ್ದರೆ ಆಗುತ್ತಿತ್ತಲ್ಲ...' ಹೆಂಡತಿಯ ಮಾತಿಗೆ ದೇಸಾಯರು ಕನಲಿ ಭುಸುಗುಟ್ಟಿದರು. 'ಅವನು ಹಾಗೆ ಹೇಳಿದ ಕೂಡಲೇ ಇದ್ದುಬಿಡೋದಾ? ನಮಗೇನು ಅಭಿಮಾನವಿಲ್ಲವೆ? ಪ್ರತಿಸಲ ನಾವೇ ಸೋಲಬೇಕಾ?'

'ಇದರಲ್ಲಿ ಸೋಲು ಏನಿದೆ?'

'ನಮ್ಮ ಮಾತು ಕೇಳಿದನಾ ಅವನು?'

'ಮದುವೆ ಅವನ ಇಷ್ಟ. ಸಂಸಾರ ಮಾಡಬೇಕಾದವನು ಅವನೇ ತಾನೆ?'

'ಅದಕ್ಕಂತಲೇ ನಾನು ಹೊರಟು ಬಂದದ್ದು. ಅವರ ಪಾಡಿಗೆ ಅವರು ಇರಲಿಬಿಡು.'

'ನೀವು ಅವನ ಜತೆ ಮಾತಾಡಿದ ರೀತಿ ನನಗಂತೂ ಸರಿಬರಲಿಲ್ಲ. ಅದೆಷ್ಟು ನಿಷ್ಠುರವಾಗಿ

